Discontent among the Physically handicapped People Working at the Factory in Lingarajapura

ಶ್ರೀ ಎಂ. ಎಸ್. ಕೃಷ್ಣನ್ (ಪುಲ್ಕೇಶ್ಪುರ).—ಮಾನ್ಯ ಸಭಾಧ್ಯಕ್ಷೆಯವರೇ, ನಾನು ಒಂದು ನೋಟೀಸ್ ಕಳಿಸಿದ್ದೇನೆ. ಸುಮಾರು 400, 500 ಜನ ಕಣ್ಣು, ಕೈ ಕಾಲು ಇಲ್ಲದೇ ಇರತಕ್ಕ ಅಂಗವಿಕಲರು ವಿಧಾನಸಾಧದ ಮುಂದೆ ಬಂದಿದ್ದಾರೆ. ಅವರೆಲ್ಲರೂ ಲಿಂಗರಾಜಪುರ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆಸೋಸಿಯೇಷನ್ ಫಾರ್ ದಿಸ್‌ಎಬಲ್ಡ್‌ನಿಂದ ಬಂದವರು. 100 ಜನ ಹೆಣ್ಣು ಮಕ್ಕಳು ಇದ್ದಾರೆ. ಯಾರಾದರೂ ಮಂತ್ರಿಗಳಿಗೆ ಹೃದಯಪದ್ದರೆ, ಕಣ್ಣು ಇದ್ದರೆ ಹೋಗಿ ನೋಡಬಹುದು. ಅವರು ಅಲ್ಲಿ 10—12 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಅವರಿಗೆ 35— 0—60 ರೂಪಾಯಿ ಕೊಡುತ್ತಿದ್ದಾರೆ. ಟ್ರೈನಿಂಗ್ ಎಂದು ಕೆಲಸ ಮಾಡಿ, ಬರೀ stipend ಕೊಟ್ಟು ಅವರನ್ನು to the maximum exent exploit ಮಾಡುತ್ತಾ ಇದ್ದಾರೆ. ಯಾರೂ ಮಾತನಾಡುವ ಹಾಗಿಲ್ಲ. ಮಾನ್ಯ ಯಾಹ್ಯಾರವರನ್ನು ಮುಖ್ಯ ಮಂತ್ರಿಗಳ ಪರವಾಗಿ ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

Sri S. M. YAHYA.—Madam Speaker, I have met them also. If I get notice I will collect information.

Sri M. S. KRISHNAN.—But, you must also consider their demands.

Sri K. H. RANGANATH.—I saw them and met them also.

Sri M. S. KRISHNAN.—You have to do something for them.

Sri K. H. RANGANATH.—I told them that I would convey the information to the Hon. Minister for Labour for doing the needful.

ಶ್ರೀ ಎಂ. ಎಸ್. ಕೃಷ್ಣನ್.—ಅವರನ್ನೆಲ್ಲಾ ಕೆಲಸದಿಂದ ಕಿತ್ತು ಹಾಕಿಬಿಟ್ಟಿದ್ದಾರೆ. ಕೆಲಸ ಕೊಡುವುದಿಲ್ಲ ಎನ್. ಎಸ್ ಅಯ್ಯಂಗಾರ್‌ರವರು ಸಿಕ್ಕಾಪಟ್ಟೆ ದುಡ್ಡು ಮಾಡಿಕೊಳ್ಳುತ್ತಿದ್ದಾರೆ ಕಮ್ಯೂನಿಸ್ಟ್ ಅಯ್ಯಂಗಾರ್ ಮಾಡುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸಭಾಧ್ಯಕ್ಷಣಿಯವರೇ, ತಮ್ಮ ಮುಖಾಂತರ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಸೇರ್ಸ್ ಟ್ಯಾಕ್ಸ್‌ಗೆ ಸಂಬಂಧಪಟ್ಟ ಹಾಗೆ ಇರುವ ಎರಡು ತಿದ್ದುಪಡಿ ಮಸೂದೆಗಳನ್ನು ನಾಳೆ ಒಂದು ಗಂಟೆ ಹೆಚ್ಚಾಗಿ ಕುಳಿತುಕೊಂಡು ಪಾಸ್ ಮಾಡಿಕೊಡುವುದಕ್ಕೆ ತಯಾರಿದ್ದೇವೆ. ಎಜುಕೇಷನ್ ಮಿನಿಸ್ಟರ್ ಊಟ ಮಾಡಿಕೊಂಡು ಬರಲಿ. Now, let us adjourn and meet at three of the clock, and take up this Adjournment Motion. We will see that those Bills are passed tomorrow. I think the Government will agree for this proposal.

MADAM SPEAKER.—What can I do if Hon. Members are not prepared to extend co-operation.

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ಭಾವನೆ ಮಾಡಬೇಕಾಗಿಲ್ಲ.

ಅಧ್ಯಕ್ಷರು.—ನಾನು ಅಜೆಂಡ್ ನಿಗದಿಮಾಡಿ, ಅದನ್ನು ಕಳುಹಿಸಿ 3 ದಿವಸ ಆಯಿತು. ಮಾನ್ಯ ಸದಸ್ಯರು ತಯಾರಿಸಿ ಬರಲಿಲ್ಲ ಎಂದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಕಾಲಹರಣ ಮಾಡಬೇಕು ಎನ್ನುವ ಪ್ರಶ್ನೆಯಲ್ಲ.

Sri M. Y. GHORPADE.—I am sure Mr. Bangarappa, Mr. Krishnan Mr. Kagodu Thimmappa and Mr. Lingappa are prepared to make speeches on this.

ಶ್ರೀ ಸಿ. ಬೈರೇಗೌಡ.—ಕೋಲಾರ ತಾಲ್ಲೂಕು ಬಾಗೇಪಲ್ಲಿಗೆ ಸಂಬಂಧಪಟ್ಟಹಾಗೆ, ಕುಡಿಯುವ ನೀರಿನ ಬಗ್ಗೆ ನೂಚನೆ ಕಳಿಸಿದ್ದೇನೆ. ಮಳೆ ಇಲ್ಲದೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಇದು ಬಹಳ ಮುಖ್ಯವಾದ ಪ್ರಶ್ನೆ. ಬಾಗೇಪಲ್ಲಿ ನಗರದಲ್ಲಿ ಕುಡಿಯುವ ನೀರು ಇಲ್ಲ, ಎಸ್ಕಿಮೇಟ್ ಬಂದಿದೆ, ದಯವಿಟ್ಟು ಮಂಜೂರು ಮಾಡಿ. ಅಷ್ಟು ಮಾಡಿದರೆ ಆಯಿತು,

MADAM SPEAKER.—The house will now stand adjourned and meet at 3-00 P.M.

The House adjourned at Eighteen Minutes past Two of the clock and reassembled at Four Minutes past Three of the clock.

[MADAM SPEAKER in the Chair]

ADJOURNMENT MOTION

re : Strike of by the Teachers

Sri H. D. DEVE GOWDA.—I move. "That the Assembly do now adjourn"

MADAM SPEAKER. —Motion moved ;

"That the Assembly do now adjourn"

†ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣೀಯವರೇ, ರಾಜ್ಯದ ಶಿಕ್ಷಕರ ಪ್ರತಿಭಟನೆ ಏನು ಇದೆ. ಈ ಪ್ರತಿಭಟನೆ ಬಹುಶಃ ಕಳೆದ 3 ವರ್ಷಗಳಿಂದ ಅವರು ಸರ್ಕಾರಕ್ಕೆ ನಲ್ಲಿಸಿರತಕ್ಕ ನ್ಯಾಯವಾದ ಬೇಡಿಕೆಗಳು ಏನು ಇವೆ, ಆ ಬೇಡಿಕೆಗಳನ್ನು ಸರ್ಕಾರದವರು ಪರಿಶೀಲಿಸಿ ಮುಂಜಾಗ್ರತೆಯಾಗಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರೆ, ಬಹುಶಃ ಇವತ್ತು ಶಿಕ್ಷಕರು ಬೀದಿಗೆ ಇಳಿದು ಪ್ರತಿಭಟನೆಯನ್ನು ಸಲ್ಲಿಸತಕ್ಕಂಥ ಪರಿಸ್ಥಿತಿ ಬರುತ್ತಾ ಇರಲಿಲ್ಲ ಎನ್ನತಕ್ಕಂಥದ್ದು ನನ್ನ ಭಾವನೆ. ನುಮಾರು 7 ಸಾವಿರ ಶಿಕ್ಷಕರು ಇವತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ವ್ಯಾಲ್ಯುಯೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಕೊಡತಕ್ಕಂಥ ದಿನಭತ್ಯ ಏನು ಇದೆ ಮತ್ತು ಪ್ರಶ್ನೆ ಪತ್ರಿಕೆಗಳಿಗೆ ಸರ್ಕಾರದವರು ಕೊಡುತ್ತಾ ಇರತಕ್ಕಂಥ ಮೌಲ್ಯವೇನು ಇದೆ, ಅದು ಸುಮಾರು 30 ವರ್ಷಗಳ ಹಿಂದೆ ನಿಗದಿ ಮಾಡಿದಂಥದ್ದು ಎಂದು ತಿಳಿದರೆ ತಪ್ಪಿಲ್ಲ. ಬಹುಶಃ ಕಳೆದ 3 ವರ್ಷಗಳಿಂದ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು ಅಂಥ ಹೇಳಿದ್ದಾರೆ, ಇದರ ಬಗ್ಗೆ ಹಲವಾರು ಬೇಡಿಕೆಗಳನ್ನು ಸಹ ಕೊಟ್ಟಿದ್ದಾರೆ. 3 ವರ್ಷಗಳಿಂದ ಸರ್ಕಾರ ಇದರ ದಿಶೆಯಲ್ಲಿ ಯಾವುದೇ ಒಂದು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳದೇ ಹೋದುದರ ತತ್‌ಪರಿಣಾಮವಾಗಿ ಶಿಕ್ಷಕರು ಇಂಥ ಒಂದು ಶಾಂತಿಯುತವಾದಂಥ ಮೆರವಣಿಗೆಯನ್ನು ತೆಗೆದುಕೊಂಡು ಬಂದರು. ತೆಗೆದುಕೊಂಡು ಬಂದು ಸರ್ಕಾರದವರ ಕಣ್ಣು ತೆರಿಸಲಿಕ್ಕೆ ಪ್ರಯತ್ನ ಮಾಡಿದರು. ಇಂಥ ಸಂದರ್ಭದಲ್ಲಿ ನಾವು ಸರ್ಕಾರಕ್ಕೆ ಒಂದು ಮಾತನ್ನು ಹೇಳದೇ ವಿಧಿಯಿಲ್ಲ.

ಅಧ್ಯಕ್ಷರು.—ರೂಲ್ಸ್ ಪ್ರಕಾರ 15 ನಿಮಿಷದೊಳಗಾಗಿ ಮಾತನಾಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—15-4-1974ರಂದು ಬೆಂಗಳೂರು ನಗರಕ್ಕೆ ಬಂದಂಥ ಉಪಾಧ್ಯಾಯರುಗಳು ಏನು ಒಂದು ಪ್ರತಿಭಟನೆ ಮಾಡಬೇಕೆಂದು ಪ್ರಾರಂಭ ಮಾಡಿದ್ದಾರೆ. ಇವತ್ತಿಗೆ ಬಹುಶಃ 7—8 ದಿವಸಗಳಾಯಿತು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳ ಬೇಕಾಗುತ್ತದೆ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಎಲ್ಲಾ ಶಿಕ್ಷಕರಿಗೆ ಅವರು ತಂದಿರತಕ್ಕ ಹಣವೆಲ್ಲಾ ಖಾಲಿ ಆಗಿರಬಹುದು. ಬಹುಶಃ ಎಷ್ಟೋ ಜನ ಅವರ ಜೇಬು ಖಾಲಿಯಾಗಿ ಉಪವಾಸ ಮಾಡುತ್ತಿದ್ದಾರೆ. ಅದನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಅನೇಕ ಜನ ಶಿಕ್ಷಕರು 50–100 ರೂಪಾಯಿ ಗಳನ್ನು ಇಟ್ಟುಕೊಂಡು ಬಂದಿದ್ದರು, ಅದು ಎಲ್ಲಾ ಖರ್ಚು ಆಗಿರುವುದರಿಂದ ಬಹುತೇಕ ಮಂದಿ ಕಡ್ಡಾಯ ಉಪವಾಸ ಮಾಡುತ್ತಿದ್ದಾರೆ, ಒಂದು ಕಡೆ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮಾನ್ ಮಳ್ಳೂರು ಆನಂದರಾಯರು ಉಪವಾಸ ಮಾಡುತ್ತಿದ್ದಾರೆ ಮತ್ತೊಂದು ಕಡೆ ಎಲ್ಲಾ ಶಿಕ್ಷಕ ವರ್ಗದವರ ಜೇಬಿನಲ್ಲಿರತಕ್ಕ ಕಾಸು ಖಾಲಿಯಾಗಿ ಅವರೂ ಉಪವಾಸ ಮಾಡುತ್ತಿದ್ದಾರೆಂದರೆ ತಪ್ಪಾಗಲಿಕ್ಕೆ ಇಲ್ಲ. ಪರಿಸ್ಥಿತಿ ಅಲ್ಲಿಗೆ ಹೋಗಿದೆ. ಇದಕ್ಕೆ ಎಡೆಕೊಡಬಾರದು ಎಂಬುದೇ, ಸರ್ಕಾರದ ಮೇಲೆ ನನ್ನ ಆರೋಪ. ವಿದ್ಯಾ ಮಂತ್ರಿಗಳು ಅವರನ್ನು ಭೇಟಿ ಮಾಡಿದಾಗ, ಎಲ್ಲಾ ನಿರ್ಣಯಗಳನ್ನು